ಕರ್ನಾಟಕ ಸರ್ಕಾರ

ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ
ಖಾತರಿ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ

ಸಂಖ್ಯೆ:ಗ್ರಾಅಪ:39:ಸಾಪನಿ(ಉಖಾಯೋ):2021-222 ದಿನಾಂಕ:12-11-2021

# ಪ್ರಕಟಣೆ

**ಸಾಮಾಜಿಕ ಪರಿಶೋಧನಾ ಸಂಘ (ಮಹಾತ್ಮ ಗಾಂಧಿ ನರೇಗಾ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು, ಇದರಲ್ಲಿ ಖಾಲಿ ಇರುವ ಜಿಲ್ಲಾ / ತಾಲ್ಲೂಕು ಸಾಮಾಜಿಕ ಪರಿಶೋಧನಾ ಸಂಪನ್ಮೂಲ ವ್ಯಕ್ತಿ ಹುದ್ದೆಗಳ ನೇಮಕಾತಿ ಪ್ರಕಟಣೆಯನುಸಾರ ನೇಮಕಾತಿ ಪ್ರಕಟಣೆ ಪ್ರಕ್ರಿಯೆ ಹಿಂಪಡೆಯುವ ಬಗ್ಗೆ.**

ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ (ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು) ಇಲ್ಲಿ ಖಾಲಿ ಇದ್ದ **ಜಿಲ್ಲಾ / ತಾಲ್ಲೂಕು ಸಾಮಾಜಿಕ ಪರಿಶೋಧನಾ ಸಂಪನ್ಮೂಲ ವ್ಯಕ್ತಿ** ನೇಮಕಾತಿಗಾಗಿ **ಸಂಖ್ಯೆ:ಗ್ರಾಅಪ:39:ಸಾಪನಿ (ಉಖಾಯೋ):2021-22 ದಿನಾಂಕ:10-11-2021ರಲ್ಲಿ** ಅರ್ಜಿ ಆಹ್ವಾನಿಸಿ **ಆರ್.ಡಿ.ಪಿ.ಆರ್. ವೆಬ್‌ಸೈಟ್‌ನಲ್ಲಿ ಹೊರಡಿಸಲಾದ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.** ದಿನಾಂಕ:11-11-2021ರಂದು ರಾಜ್ಯ ವ್ಯಾಪ್ತಿ ದಿನಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಲು ವಾರ್ತಾ & ಸಾರ್ವಜನಿಕ ಸಂಪರ್ಕ ಅಧಿಕಾರಿ ಕಛೇರಿಗೆ ಪ್ರಕಟಣೆ ವಿವರಗಳನ್ನು ಕಳುಹಿಸಲಾಗಿದೆ. ಕೇಂದ್ರ ಚುನಾವಣಾ ಆಯೋಗವು ಕರ್ನಾಟಕ ರಾಜ್ಯ ವಿಧಾನ ಪರಿಷತ್ತಿನ ಚುನಾವಣೆಯನ್ನು ದಿನಾಂಕ:10-12-2021 ನಡೆಸಲು ದಿನಾಂಕ:09-11-2021ರಂದು ಅಧಿಸೂಚನೆ ಹೊರಡಿಸಿದ್ದು, **ದಿ:09-11-2021 ರಿಂದಲೇ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ** ಹಿನ್ನೆಲೆಯಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸದಿರಲು ವಾರ್ತಾ ಮತ್ತು ಪ್ರಚಾರ ಇಲಾಖೆಯನ್ನು ಕೋರಲಾಗಿದೆ.

**ಈ ಹಿನ್ನೆಲೆಯಲ್ಲಿ ಸಂಖ್ಯೆ:ಗ್ರಾಅಪ:39:ಸಾಪನಿ (ಉಖಾಯೋ):2021-22 ದಿನಾಂಕ:10-11-2021 ರಲ್ಲಿ ಅರ್ಜಿ ಆಹ್ವಾನಿಸಿ, ಆರ್.ಡಿ.ಪಿ.ಆರ್. ವೆಬ್‌ಸೈಟ್‌ನಲ್ಲಿ ಸಾಮಾಜಿಕ ಪರಿಶೋಧನಾ ಸಂಘ (ಮಹಾತ್ಮ ಗಾಂಧಿ ನರೇಗಾ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು, ಇದರಲ್ಲಿ ಖಾಲಿ ಇರುವ ಜಿಲ್ಲಾ / ತಾಲ್ಲೂಕು ಸಾಮಾಜಿಕ ಪರಿಶೋಧನಾ ಸಂಪನ್ಮೂಲ ವ್ಯಕ್ತಿ ಹುದ್ದೆಗಳ ನೇಮಕಾತಿಗಾಗಿ ಹೊರಡಿಸಲಾದ ಪ್ರಕಟಣೆಯನ್ನು ಈ ಮೂಲಕ ಹಿಂಪಡೆಯಲಾಗಿದೆ.**

**ನಿರ್ದೇಶಕರು**
ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ

ಮೊದಲನೇ ಮಹಡಿ, ಅಭಯ ಕಾಂಪ್ಲೆಕ್ಸ್, ಕೋಳಗೇರಿ ಅಭಿವೃದ್ಧಿ ಮಂಡಳಿ ಕಟ್ಟಡ, 55, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು -560 020. ದೂರವಾಣಿ ಸಂಖ್ಯೆ : 080- 23460650/651. **E-mail: dir.sa.nrega@gmail.com**